# ರಾಜೀನಾಮೆ ಕೊಟ್ಟವರು ಚುನಾವಣೆ ವೆಚ್ಚ ಭರಿಸಲಿ

**ಹರಪನಹಳ್ಳಿ:** ರಾಜೀನಾಮೆ ನೀಡಿದವರಿಂದಲೇ ಉಪಚುನಾವಣೆ ಸಂಪೂರ್ಣ ವೆಚ್ಚ ಭರಿಸುವ ಕಾಯ್ದೆ ಜಾರಿಯಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಕೆ.ಸಿ.ಕೊಂಡಯ್ಯ ಹೇಳಿದರು. ಪಟ್ಟಣದಲ್ಲಿ ಮಾತನಾಡಿ, ಶಾಸಕರನ್ನು 5 ವರ್ಷಗಳ ಅವಧಿಗೆ ಆಯ್ಕೆ ಮಾಡುತ್ತಾರೆ. ಆದರೆ, ತಮ್ಮ ವೈಯಕ್ತಿಕ ಆಸೆಗೆ ಪಕ್ಷಾಂತರ ಹೆಚ್ಚಾಗುತ್ತಿದ್ದು ಜನರ ತೆರಿಗೆ ಹಣ ಚುನಾವಣೆಗೆ ಪೋಲಾಗುತ್ತಿದೆ ಎಂದರು. ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ 4 ಗೋಡೆಗಳ ಮಧ್ಯೆ ಚರ್ಚಿಸಬೇಕಾದ ವಿಷಯವನ್ನು ಶಾಸಕರು ಬೀದಿಗೆ ತಂದಿದ್ದಾರೆ. ಜನ ಅಸಹ್ಯಪಟ್ಟುಕೊಳ್ಳುತ್ತಿದ್ದಾರೆ. ಬಿಜೆಪಿ ಕುಮ್ಮಕ್ಕಿನಿಂದಲೇ ರಾಜ್ಯದಲ್ಲಿ ಇಷ್ಟೆಲ್ಲಾ ಅವಾಂತರ ನಡೆಯುತ್ತಿದೆ. ಆದರೆ, ಇದಕ್ಕೂ-ನಮಗೂ ಯಾವುದೇ ಸಂಬಂಧವಿಲ್ಲ ಎಂಬಂತೆ ಬಿಜೆಪಿ ಡಬಲ್‌ಗೇಮ್ ಆಡುತ್ತಿದೆ. ಸಿದ್ದರಾಮಯ್ಯನ ಮೇಲೆ ವಿನಾ ಕಾರಣ ಗೂಬೆ ಕೂರಿಸುವ ಕೆಲಸ ನಡೆಯುತ್ತಿದೆ ಎಂದು ದೂರಿದರು.